ESI.A.No.6/2024

AW-1,

ದಿನಾಂಕಃ 11-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. NKS ವಕೀಲರಿಂದ

ನಾನು ಅರ್ಜಿದಾರ ಸಂಸ್ಥೆಯ ಪ್ರೊಪ್ರೇಟರ್ ಆಗಿರುತ್ತೇನೆ. ಕಳೆದ 7 ವರ್ಷಗಳಿಂದ ನಾನು ಅರ್ಜಿದಾರ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ಇ ಎಸ್ ಐ ಕೋಡನ್ನು ಪಡೆಯಲು ನಾನೇ ಖುದ್ದಾಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಆ ರೀತಿ ಅರ್ಜಿ ಸಲ್ಲಿಸುವಾಗ 5 ಜನ ಕಾರ್ಮಿಕರು ಇದ್ದಾರೆ ಎಂದು ತಿಳಿಸಿದ್ದೆ. ಆ ರೀತಿಯಲ್ಲಿ ಅರ್ಜಿ ಸಲ್ಲಿಸಿದಾಗ ನನಗೆ ಕನ್ಫರ್ಮೇಶನ್ ಮೇಲ್ ಬಂದಿತ್ತು ಎಂದರೆ ನಿಜ. ದಿಃ3-4-2023 ರಂದು 30-5-2019 ರಿಂದ 31-5-2022 ರ ಡಿಫಾಲ್ಟ್ ಅವಧಿಯ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ನನಗೆ ನೋಟೀಸ್ ಬಂದಿತ್ತು ಎಂದರೆ ನಿಜ. ನನ್ನಿಂದ ರೂ.1,69,692-00 ಗಳನ್ನು ಪಾವತಿಸಬೇಕೆಂದು ಕೇಳಿದ್ದರು ಎಂದರೆ ನಿಜ. ಆನಂತರ 1-5-2023 ಕ್ಕೆ ಖುದ್ದು ಸುನಾವಣೆಗೆ ಹಾಜರಾಗುವಂತೆ ನನ್ನನ್ನು ಕರೆದಿದ್ದರು ಎಂದರೆ ನಿಜ. ನನಗೆ ಆರೋಗ್ಯ ಸಮಸ್ಯೆ ಇದ್ದುದರಿಂದ ಮೊದಲನೇ ನೋಟೀಸಿಗೆ ನಾನು ಹಾಜರಾಗಿರಲಿಲ್ಲ. 3 ನೇ ನೋಟೀಸಿಗೆ ನಾನು ಹಾಜರಾದೆ. ಖುದ್ದು ಸುನಾವಣೆಯ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನೆನಪಿಲ್ಲ. ನನ್ನ ವೇಜಸ್ ಬುಕ್ಕಿನಲ್ಲಿ ಅರ್ಧ ಜನ ಕಾರ್ಮಿಕರಿಗೆ ನಗದಾಗಿ ಸಂಬಳವನ್ನು ಪಾವತಿ ಮಾಡುತ್ತಿದ್ದೆ. ಅವರು ಹೊರ ಗುತ್ತಿಗೆಯ ಮೇಲೆ ಬಂದು ನನ್ನಲ್ಲಿ ಕೆಲಸ ಮಾಡುತ್ತಿದ್ದರು. ಉಳಿದವರಿಗೆ ಅಕೌಂಟ್ ಮೂಲಕ ಸಂಬಳವನ್ನು ಪಾವತಿ ಮಾಡುತ್ತಿದ್ದೆ. ಅಟೆಂಡೆನ್ಸ ರಿಜಿಸ್ಟರಿನಲ್ಲಿ ಔಟ್ ಸೋರ್ಸಿಂಗ್ ಮೇಲೆ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಸಂಬಳ ನೀಡಿದ ಬಗ್ಗೆ ಸಹಿಯನ್ನು ಪಡೆದುಕೊಳ್ಳುತ್ತಿದ್ದೆ. ಔಟ್ ಸೋರ್ಸಿಂಗ್ನಿಂದ ಕಾರ್ಮಿಕರನ್ನು ಪಡೆದ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ ಕೇವಲ ಅಟೆಂಡೆನ್ಸ ರಿಜಿಸ್ಟರಿನಲ್ಲಿ ಅವರ ಸಹಿಯನ್ನು ಮಾತ್ರ ಪಡೆದುಕೊಳ್ಳುತ್ತಿದ್ದೆ. ಕಾರ್ಮಿಕರಿಗೆ ಸಂಬಳ ಪಾವತಿ ಮಾಡಿದ ಬಗ್ಗೆ ಸರಿಯಾದ ದಾಖಲೆಗಳನ್ನು ನಾನು ಕೊಟ್ಟಿಲ್ಲ ಆದ್ದರಿಂದ ಎದುರುದಾರರು ಮಾಡಿರುವ ಆದೇಶವು ಸರಿಯಾಗಿದೆ ಎಂದರೆ ಸರಿಯಲ್ಲ. ಅಟೆಂಡೆನ್ಸ ಪ್ರಕಾರ ಕೆಲಸ ಮಾಡುತ್ತಿರುವ ಕಾರ್ಮಿಕರ ಬಗ್ಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿರುತ್ತೇನೆ ಆ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂಬ ಕಾರಣಕ್ಕೆ 13-12-2023 ಕ್ಕೆ ನನಗೆ ಗಾರ್ನಿಶೀ ಆದೇಶ ಬಂದಿತ್ತು ಎಂದರೆ ನಿಜ. ನಾನು ಇದುವರೆಗೂ ಯಾವುದೇ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಇ ಎಸ್ ಐ ಆಫೀಸಿನಲ್ಲೇ ಆನ್ ಲೈನ್ ಮೂಲಕ ಮತ್ತು ಬೆಂಗಳೂರಿನ ಇ ಎಸ್ ಐ ಆಫೀಸಿನಲ್ಲಿ 40 ಸಾವಿರ ಡಿಡಿ ಮೂಲಕ ವಂತಿಗೆಯನ್ನು ಪಾವತಿ ಮಾಡಿದ್ದೇನೆ. ಗಾರ್ನಿಶೀ ಆದೇಶದ ವಿರುದ್ಧ ನಾನು ಅಪೀಲನ್ನು ಸಲ್ಲಿಸಿದ್ದೇನೆ. ಗಾರ್ನಿಶೀ ಆದೇಶದ ಆಧಾರದಲ್ಲಿ ನನ್ನ ಬ್ಯಾಂಕ್ ಅಕೌಂಟ್ಗಳನ್ನು ಫ್ರೀಜ್ ಮಾಡಿದ್ದರು ಆದ್ದರಿಂದ ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದೇನೆ. ನಾನು

ESI.A.No.6/2024
AW-1,

ನ್ಯಾಯಾಲಯಕ್ಕೆ ಕಾರ್ಮಿಕರಿಗೆ ವೇತನ ಕೊಡುತ್ತಿದ್ದ ಬಗ್ಗೆ ಎಲ್ಲಾ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.